<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ</u>

**ಸಿ.ಸಿ ಃ 522/2024**

ಸಾಕ್ಷಿದಾರರ ಹೆಸರು ಃ ಕೆ ಕುಮಾರ್

ತಂದೆಯ ಹೆಸರು ಃ ಲೇಟ್ ಕೃಷ್ಣಮೂರ್ತಿ

ವಯಸ್ಸು ಃ **53** ವರ್ಷ

ಉದ್ಯೋಗ ಃ ಅಬಕಾರಿ ನಿರೀಕ್ಷಕರು,

ವಾಸಸ್ಥಳ ಃ ನ ರಾ ಪುರ

**ಸಿ.ಡಬ್ಲ್ಯೂ-1**

**ಪಿ.ಡಬ್ಲ್ಯೂ-1**

ದಿನಾಂಕಃ **15.06.2025** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ</u>

ನಾನು 2024 ನೇ ಇಸವಿಯಿಂದ 10-06-2024 ನೇ ಇಸವಿಯವರೆವಿಗೂ ನ.ರಾ.ಪುರ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 28.03.2024 ರಂದು ನಾನು ಗಸ್ತು ಕರ್ತವ್ಯದಲ್ಲಿದ್ದಾಗ ನನಗೆ ಬಂದ ಬಾತ್ಮಿದಾರರ ಮಾಹಿತಿಯಂತೆ ನಾನು ಆರೋಪಿತರ ಮನೆ ಹೊನ್ನೆಕೂಡಿಗೆ ಗ್ರಾಮ ಕಸಬಾ ಹೋಬಳಿ ಗೆ ಚಾಸಾ-4 ರವರ ಒಟ್ಟಿಗೆ ಪಂಚ ಸಾಕ್ಷಿದಾರರಾದ ಚಾಸಾ-2 ಮತ್ತು 3 ರವರಿಗೆ ಪ್ರಕರಣದ ಬಗ್ಗೆ ಮಾಹಿತಿ ತಿಳಿಸಿ ಅವರನ್ನು ನಮ್ಮ ಜೊತೆಗೆ ಮದ್ಯಾಹ್ನ 3.30 ಕ್ಕೆ ಇಲಾಖಾ ಜೀಪಿನಲ್ಲಿ ಹೋಗಿ ನೋಡಿ ಪರಿಶೀಲಿಸಲಾಗಿ ಸದರಿ ಆರೋಪಿತರ ಮನೆಯ ಎಡ ಭಾಗದ ಕೊಠಡಿಯ ಮಂಚದ ಕೆಳಗೆ ಎರಡು ಪ್ಲಾಸ್ಟಿಕ್ ಗೋಣಿಚೀಲ ಇದ್ದದ್ದು ಕಂಡು ಬಂತು. ನಾನು ಸ್ಥಳದಲ್ಲಿಯೇ ಚಾಸಾಸ-2 ಮತುತ 3 ರವರ ಸಮಕ್ಷಮ ಸಮುಚ್ಚಿತ ಶೋಧನಾ ವಾರೆಂಟ್ ಅನ್ನು ತಯಾರು ಮಾಡಿಕೊಂಡಿರುತ್ತೇನೆ. ಸದರಿ ಚೀಲಗಳನ್ನು ಪರಿಶೀಲಿಸಿದಾಗ 90 ಮಿಲಿ Original Choice whiskey ಯ 190 ಟೆಟ್ರಾ ಪ್ಯಾಕ್ ಗಳು ಕಂಡು ಬಂದವು. ಒಟ್ಟು ಅವುಗಳ ಪ್ರಮಾಣ 17.100 ಲೀಟರ್. ಆರೋಪಿತರವನ್ನು ಸದರಿ ಮಧ್ಯ ದಾಸ್ತಾನು ಮಾಡಲು ಅನುಮತಿ ಅಥವಾ ಪರವಾನಿಗೆ ಇಟ್ಟುಕೊಂಡಿರುವುದರ ಬಗ್ಗೆ ಕೇಳಲಾಗಿ ಆರೋಪಿತರು ಇಲ್ಲ ಎಂದು ನುಡಿದಿರುತ್ತಾರೆ. ಆದ್ದರಿಂದ ಸದರಿ 192 ಟೆಟ್ರಾ

ಪ್ಯಾಕ್ ಗಳನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಜಪ್ತಿ ಮಾಡಿ ಸ್ಥಳ ಮತ್ತು ಜಪ್ತಿ ಪಂಚನಾಮೆಯನ್ನು ಮಧ್ಯಾಹ್ನ 3.30 ರಿಂದ 4.30 ರವರೆಗೆ ಸ್ಥಳದಲ್ಲಿಯೇ ದಾಖಲು ಮಾಡಿರುತ್ತೇನೆ. ಸಾಕ್ಷಿಯು ಸದರಿ ಸ್ಥಳ ಮತ್ತು ಜಪ್ತಿ ಪಂಚನಾಮೆಯನ್ನು ಗುರುತಿಸಿದ್ದು ಅದನ್ನು ನಿಪಿ-1 ಎಂದು ಮತ್ತು ತನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮುಂದುವರೆದು ಸ್ಥಳದಲ್ಲಿ ದೊರಕಿದ ಎರಡು ಪ್ಲಾಸ್ಟಿಕ್ ಚೀಲಗಳಲ್ಲಿ ಇದ್ದ ಮದ್ಯದ ಟೆಟ್ರಾ ಪ್ಯಾಕ್ ಗಳ ಪೈಕಿ ಒಂದು ಚೀಲದಿಂದ ತಲಾ 15 ರಂತೆ ಒಟ್ಟು 30 ಟೆಟ್ರಾ ಪ್ಯಾಕ್ ಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸಿಕೊಡಲು ಪ್ರತ್ಯೇಕವಾಗಿ ಒಂದುಕ ಬಿಳಿಯ ಬಟ್ಟೆಯಿಂದ ಸೀಸ್ ಮಾಡಿ ಇಲಾಖಾ ಮೊಹರು 353 ಅನ್ನು ಹಾಕಿ ಸದರಿ ಬಿಳಿಯ ಬಟ್ಟೆಯ ಮೇಲೆ ನನ್ನ ಹಾಗೂ ಪಂಚ ಸಾಕ್ಷಿದಾರರ ಸಹಿಗಳುಳ್ಳ ಚೀಟಿಯನ್ನು ಅಂಟಿಸಿರುತ್ತೇನೆ. ಉಳಿಕೆ 160 ಟೆಟ್ರಾ ಪ್ಯಾಕ್ ಗಳನ್ನು ಬೇರೆ ಒಂದು ಚೀಲದಲ್ಲಿ ಹಾಕಿ ಕಟ್ಟಿರುತ್ತೇನೆ ಮತ್ತು ಸದರಿ ಚೀಲಕ್ಕೆ ನನ್ನ ಹಾಗೂ ಪಂಚ ಸಾಕ್ಷಿದಾರರ ಸಹಿಗಳುಳ್ಳ ಚೀಟಿಯನ್ನು ಅಂಟಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಜರುಗಿಸುವ ಸಂಧರ್ಭದಲ್ಲಿ ಪೋಟೊ ಮತ್ತು ಚಿತ್ರಿಕರಣವನ್ನು ಮಾಡಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಪೋಟೊವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಆರೋಪಿತರಿಗೆ 41(ಎ) ಸಿ ಆರ್ ಪಿ ಸಿ ಅಡಿಯಲ್ಲಿ ನೋಟಿಸ್ ನೀಡಿ ತನಿಖೆಗೆ ಸಹಕರಿಸುವಂತೆ ಸೂಚನೆ ನೀಡಿರುತ್ತೇನೆ. ನಂತರ ನಾನು ಕಚೇರಿಗೆ ಹಾಜರಾಗಿ ಸದರಿ ಕೃತ್ಯದ ಬಗ್ಗೆ ವರದಿಯನ್ನು ತಯಾರು ಮಾಡಿರುತ್ತೇನೆ. ಸಾಕ್ಷಿಯು ಸದರಿ ಸ್ವ ಪಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಜಪ್ತಿ ಮಾಡಿಕೊಂಡ ವಸ್ತುಗಳನ್ನು ಠಾಣಾ ಪಿ ಎಫ್ ನಂಬರ್ 47/2023-24 ರಂತೆ ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿತರ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಪ್ರ.ವ.ವ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಸಾಕ್ಷಿಯು ಕಲಂ 65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದ ಅಡಿಯಲ್ಲಿ ನೀಡಿರುವ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ 31 ಟೆಟ್ರಾ ಪ್ಯಾಕ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆ ಮಾಲು -1 ಎಂದು ಗುರುತಿಸಲಾಯಿತು. ಬಿಳಿ

ಬಟ್ಟೆಯನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು -2 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ನಾನು ಕಡತವನ್ನು ಚಾಸಾ-8 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ. ಎನ್ ವಿ ಎಸ್ ವಕೀಲರಿಂದ ಃ</u>

ನಮಗೆ ಸದರಿ ದಿನದಂದು ಬಾತ್ಮಿದಾರರಿಂದ ಮಧ್ಯಾಹ್ನ 2.30 ಕ್ಕೆ ಮಾಹಿತಿ ಬಂದಿರುತ್ತದೆ. ನಾನು ಚಾಸಾ-2 ಮತ್ತು 3 ರವರನ್ನು ಸ್ಥಳದಲ್ಲಿಯೇ ಬರ ಮಾಡಿಕೊಂಡಿರುತ್ತೇನೆ. ಸದರಿ ದಾಳಿಗೆ ನಾನು, ಚಾಸಾ-4 ಮತ್ತು ಇಲಾಖಾ ವಾಹನದ ಚಾಲಕರು ಹೋಗಿರುತ್ತೇವೆ. ನಿಪಿ-1 ರಲ್ಲಿ ಯಾರು ಯಾರು ದಾಳಿಗೆ ಹೋಗಿದ್ದೇವು ಎಂದು ನಮೂದಿಸಿರಲಿಲ್ಲ ಎಂದರೆ ಸರಿ. ನಾವು ಕೃತ್ಯ ನಡೆದ ಸ್ಥಳಕ್ಕೆ ಮಧ್ಯಾಹ್ನ 3.30 ಕ್ಕೆ ಹೋಗಿದ್ದೇವು. ಆರೋಪಿತರ ಮನೆ ಅಕ್ಕ ಪಕ್ಕ ಮನೆಗಳು ಇವೆ ಎಂದರೆ ಸರಿ. ನಾವು ಸ್ಥಳಕ್ಕೆ ಭೇಟಿ ನೀಡಿದಾಗ ಮೂರು ನಾಲ್ಕು ಜನ ಇದ್ದರು. ನಮ್ಮ ಇಲಾಖಾ ವಾಹನದ ಚಾಲಕ ನಿಪಿ-1 ಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಮುದ್ದೆ ಮಾಲು -1 ರ ಬ್ಯಾಚ್ ನಂಬರ್ ಮತ್ತು ಉತ್ಪಾದನಾ ದಿನಾಂಕ ಮತ್ತು ಅಡೇಸಿವ್ ಲೆಬಲ್ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-2 ರಲ್ಲಿ ಸದರಿ ಫೋಟೊವನ್ನು 2.59 ನಿಮಿಷಕ್ಕೆ ತೆಗೆಯಲಾಗಿದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಎರಡು ಪ್ಲಾಸ್ಟಿಕ್ ಚೀಲಗಳು ಇರುವುದಿಲ್ಲ ಎಂದರೆ ಸರಿ. ಮುದ್ದೆ ಮಾಲು -2 ರ ಮೇಲೆ ಯಾವುದೇ ಚೀಟಿ ಅಂಟಿಸಲಾಗಿರುವುದಿಲ್ಲ ಎಂದರೆ ಸರಿ. 190 ಟೆಟ್ರಾ ಪ್ಯಾಕ್ ಗಳು ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸರಿ. ಮುದ್ದೆ ಮಾಲು -1 ರಲ್ಲಿ ರಾಜಾ ವಿಸ್ಕಿ ಟೆಟ್ರಾ ಪ್ಯಾಕ್ ಇದೆ ಎಂದರೆ ಸರಿ. ಸದರಿ ರಾಜಾ ವಿಸ್ಕಿ ಟೆಟ್ರಾ ಪ್ಯಾಕ್ ಜಪ್ತಿ ಯಾದ ಬಗ್ಗೆ ನಿಪಿ-1 ರಲ್ಲಿ ನಮೂದು ಆಗಿರುವುದಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ 30 ಟೆಟ್ರಾ ಪ್ಯಾಕ್ ಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು-1 ರಲ್ಲಿ ಒಟ್ಟು 31 ಟೆಟ್ರಾ ಪ್ಯಾಕ್ ಗಳು ಇವೆ ಎಂದರೆ ಸರಿ. ನಿಪಿ-1 ರಲ್ಲಿ ಯಾರ ಮೊಬೈಲ್ ನಿಂದ ನಿಪಿ-2 ಭಾವಚಿತ್ರವನ್ನು ತೆಗೆದುಕೊಂಡರು ಎಂದು ನಮೂದಿಸಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಆರೋಪಿತರ ಮನೆ ವಿಳಾಸಕ್ಕೆ ಸಂಬಂಧಿಸಿದ ಮನೆಯ ಮಾಹಿತಿಯನ್ನು ದಾಖಲೆಗಳ ಮೂಲಕ ಪರಿಶೀಲಿಸಿರುವುದಿಲ್ಲ ಎಂದರೆ ಸರಿ. ನಿಪಿ-2 ರಲ್ಲಿ ಒಂದು ಬಿಳಿ ಮತ್ತು ನೀಲಿ ಬಣ್ಣದ ಚೀಲ ಇದೆ ಎಂದರೆ ಸರಿ. ನ್ಯಾಯಾಲಯದ

ಮುಂದೆ ಬಿಳಿ ಮತ್ತು ನೀಲಿ ಬಣ್ಣದ ಚೀಲ ಇರುವುದಿಲ್ಲ ಎಂದರೆ ಸರಿ. ನಾನು ನಿಪಿ-1 ರಂತೆ ಸ್ಥಳ ಮತ್ತು ಜಪ್ತಿ ಪಂಚನಾಮೆಯನ್ನು ದಾಖಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-3 ರಂತೆ ಸ್ವ ಪಿರ್ಯಾದಿಯನ್ನು ದಾಖಲು ಮಾಡಿಕೊಂಡು ನಿಪಿ-4 ರಂತೆ ಎಫ್ ಐ ಆರ್ ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಟೆಟ್ರಾ ಪ್ಯಾಕ್ ಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಃಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

Sd/-xx

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ